ಶ್ರೀ ಪಿ. ಎಂ. ಬಂಗಿ.—ತಾವು ಇದರ ಬಗ್ಗೆ ಏನೊಂದು ಆಜ್ಞೆ ಕೊಟ್ಟಿದ್ದೀರಿ ಅದಕ್ಕೆ ವಿರುದ್ಧವಾಗಿ ಜಮಖಂಡಿ ತಾಲೂಕಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ಕಟ್ಟಡ ಫಂಡನ್ನು ವಸೂಲು ಮಾಡಿದ್ದಾರೆ. ಅದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಹಾಗೆ ಕಡ್ಡಾಯವಾಗಿ ವಸೂಲು ಮಾಡತಕ್ಕದ್ದು ಸರ್ಕಾರದ ಗಮನಕ್ಕೆ ಬಂದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಂ. ಸಜ್ಜನ್.—ಮುದ್ದೇಬಿಹಾಳ್‌ನಲ್ಲಿ ಖಾಸಗೀ ಸಂಸ್ಥೆಯವರು ಬಲಾತ್ಕಾರವಾಗಿ ಈ ರೀತಿ ಹಣವನ್ನು ವಸೂಲು ಮಾಡುತ್ತಾರೆ. ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಅದು ಒಂದು ಜನರಲ್ ಸ್ಟೇಟ್‌ಮೆಂಟ್ ಆಯಿತು. ಇಂಥವರು ಮಾಡುತ್ತಾರೆಂದು ಹೇಳಿದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಪಿ. ಎಂ. ಘಾಡಿ.—ಇದರ ಬಗ್ಗೆ ಒಂದು ಏಕ ಸದಸ್ಯ ಆಯೋಗ ನೇಮಿಸಿದ್ದೀರಿ. ಅದರ ವರದಿ ಏನಾದರೂ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಆ ಆಯೋಗ ಇನ್ನೂ ಎನ್‌ಕ್ವಾಯರಿ ಮಾಡುತ್ತಿದೆ. ಅಂಕಿ ಅಂಶಗಳನ್ನು ಸಂಗ್ರಹಿಸುತ್ತಿದ್ದಾರೆ. ಇನ್ನೂ ಅದರ ರಿಪೋರ್ಟು ಬಂದಿಲ್ಲ.

ಶ್ರೀ ಎನ್. ಬಸವಯ್ಯ.—ಖಾಸಗೀ ಸಂಸ್ಥೆಯವರು ಡೊನೇಶನ್ ಕಲೆಕ್ಟ್ ಮಾಡಬಾರದ ಎಂದು ಆದೇಶವನ್ನು ಕೊಟ್ಟಿದ್ದೀರಿ. ಆದರೆ ಅವರಿಗೆ ಇದರಿಂದ ಸ್ವಲ್ಪ ತೊಂದರೆಯಾಗುತ್ತದೆ ಆದ್ದರಿಂದ ಬೆಟರ್‌ಮೆಂಟ್ ಫೀ ಏನು ಕಲೆಕ್ಟ್ ಮಾಡುತ್ತಿದ್ದಾರೆ, ಅದರಲ್ಲಿ 50 ಪರ್‌ಸೆಂಟ್ ಆಯಾ ಸಂಸ್ಥೆಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri A. R. BADARINARAYANA.—It is a suggestion for action.

Villages having no Wells in Muddebihal Taluk

64. Sri M. M. SAJJAN (Muddebihal).—

Will the Minister for Community Development and Social Welfare be pleased to state :—

(*a*) the villages having no wells in Muddebihal taluk of Bijapur District ;

(*b*) the reason for not sinking wells in these villages by the Government ;

(*c*) whether these villagers are in a positian to raise popular contributions to construct the wells ?

Sri M. MALLIKARJUNASWAMY (Minister for Community Development and Social Welfare).—

(*a*) The following are the four villages having no wells :

(1) Baladinni.
(2) Takkalki.
(3) Karkur.
(4) Jinjaraguddi.

(SRI M. MALLIKARJUNASWAMY)

(*b*) Jinjaraguddi village is surrounded by river Krishna and the villagers are using the river water.

Sinking of a drinking water Well at Baladinni was attempted but was abandoned since brackish water was tapped.

Selection of suitable sites in the other two villages had to be decided in consultation with the Geologist.

(*c*) A nominal contribution of 5 per cent of the cost will be realised from the panchayats concerned.

ಶ್ರೀ ಎಂ. ಎಂ. ಸಜ್ಜನ್.—ಜಿಂಜರಗುಡ್ಡಿ ಗ್ರಾಮದ ಸುತ್ತಲೂ ಕೃಷ್ಣಾ ನದಿಯು ಹರಿಯುತ್ತಿದ್ದು ಗ್ರಾಮಸ್ಥರು ಆ ನದೀ ನೀರನ್ನು ಉಪಯೋಗಿಸುತ್ತಿದ್ದಾರೆ ಎಂದು ಹೇಳಿದ್ದೀರಿ. ಈಗ ನದಿಯಲ್ಲಿ ನೀರೇ ಇಲ್ಲ. ಹೀಗಿರುವಾಗ ಅವರಿಗೆ ಎಲ್ಲಿಂದ ನೀರು ತರುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೃಷ್ಣಾ ನದಿಯಲ್ಲಿ ನೀರು ಇತ್ತು. ಈಗ ಇಲ್ಲವೆಂದು ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ ಅವರಿಗೆ ನೀರು ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಎಂ. ಸಜ್ಜನ್.—ನೀವು ಬಾಳದಿನ್ನಿ ಮತ್ತು ಅದರ ಪಕ್ಕದ ಊರುಗಳಿಗೆ ನೀರು ಎಲ್ಲಿಂದ ತಂದು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಬಾಳದಿನ್ನಿಯಲ್ಲಿ ಒಂದು ಬಾವಿ ತೆಗೆದುಕೊಂಡರೂ ಅದರಲ್ಲಿ ನೀರು ಬೀಳಲಿಲ್ಲ. ಅದಕ್ಕೆ ಇನ್ನೊಂದು ಬಾವಿಯನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಂ. ಸಜ್ಜನ್.—ಕಳೆದ 25 ವರ್ಷಗಳಿಂದಲೂ ಅಲ್ಲಿ ಈ ರೀತಿಯಾಗಿ ನೀರು ಇಲ್ಲದೆ ಇರುವುದಕ್ಕೆ ಕಾರಣವೇನು ?

Sri M. MALLIKARJUNASWAMY.—It is too general question.

Lime Stone Deposit Survey around Talikot

67. Sri M. M. SAJJAN (Muddebihal).—

Will the Minister for Industries be pleased to state :—

(*a*) whether the Geological Department has finally surveyed and investigated the deposits of lime-stones around Talikot in Muddebihal taluk and has submitted a report that such deposits would be available for a cement factory for a period of one thousand (1,000) years to come ;

(*b*) whether the Government has asked for the feasibility report in this connection ;

(*c*) the plan and the estimate of the said cement factory ;

(*d*) whether it is not a fact that such an industry of cement factory is inevitable and essential in Bijapur District ?